**ಓಎಸ್. ನಂ.*08/2020***

**ಪಿಡಬ್ಲೂ: *01***

**ಇಂದು ದಿನಾಂಕ:*03.09.2024* ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**<u>ಮುಂದುವರೆದ ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ.ಸಿ.ಕೆ.ಎಂ.ವಕೀಲರಿಂದಃ</u>**

ದಿನಾಂಕಃ 06-09-1989 ರ ನೊಂದಣಿ ವಿಭಾಗ ಪತ್ರದ ಪ್ರಕಾರ ಸರ್ವೆ ನಂ.37/2 ರಲ್ಲಿ ನನ್ನ ಮತ್ತು ನನ್ನ ತಾಯಿಯ ಭಾಗಕ್ಕೆ ಮೂರನೇ ಒಂದು ಭಾಗ ಅಂದರೆ 4 ಎಕರೆ ಜಮೀನು ಕೊಟ್ಟಿದ್ದಾರೆ ಎಂದರೆ ಸುಳ್ಳು. ಸರ್ವೆ ನಂ.37/2 ರಲ್ಲಿ ಒಟ್ಟು 4 ಎಕರೆ ಇದೆ. ಸದರಿ 4 ಎಕರೆ ಜಮೀನಿನಲ್ಲಿ ನಾವು ಸ್ವಾಧೀನ ಇದ್ದೇವೆ ಎಂದರೆ ಸರಿ. ಅದರ ಜೊತೆ ಸರ್ವೆ ನಂ.35/2 ರಲ್ಲಿಯೂ ಸ್ವಾಧೀನ ಇದ್ದೇವೆ. ಹರಗೂರು ಗ್ರಾಮದಲ್ಲಿ ಇರುವ ಹೆಂಚಿನ ಮನೆ ಉತ್ತರ ದಿಕ್ಕಿನ ಮೂರನೇ ಒಂದು ಭಾಗದಲ್ಲಿ ಸ್ವಾಧೀನ ಇದ್ದೇವೆ ಎಂದರೆ ಒಟ್ಟು ಕುಟುಂಬದಲ್ಲಿ ಇದ್ದೇವೆ. ಆ ಮನೆಯಲ್ಲಿ ನಾನು, ನನ್ನ ಪತ್ನಿ ಮತ್ತು ಮಕ್ಕಳು, ನನ್ನ ತಂದೆ ತಾಯಿ ಮತ್ತು ನನ್ನ ತಮ್ಮ, ನನ್ನ ತಮ್ಮನ ಹೆಂಡತಿ ಮತ್ತು ಮಕ್ಕಳು ಎಲ್ಲರು ವಾಸವಿದ್ದೇವೆ. ನಾವೆಲ್ಲರೂ ಆ ಮನೆಯಲ್ಲಿ ಒಟ್ಟಾ ವಾಸ ಇರುವ ಬಗ್ಗೆ ದಾಖಲೆ ಇದೆ. ಮನೆಯ ಉತ್ತರ ದಿಕ್ಕಿನ ಮೂರನೇ ಒಂದು ಭಾಗದಲ್ಲಿ ನಾನು ನನ್ನ ಪತ್ನಿ ಮತ್ತು ಮಕ್ಕಳು ಮಾತ್ರ ವಾಸವಿದ್ದೇವೆ ಆದರೂ ಸಹಾ ನನ್ನ ತಂದೆ ತಾಯಿ ಮತ್ತು ನನ್ನ ತಮ್ಮ, ನನ್ನ ತಮ್ಮನ ಹೆಂಡತಿ ಮತ್ತು ಮಕ್ಕಳು ಎಲ್ಲರು ವಾಸವಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿಭಾಗ ಪತ್ರದ ಪ್ರಕಾರ ನನ್ನ ತಂದೆಯ 2 ನೇ ಪತ್ನಿ ಶಿವಮ್ಮ ಮತ್ತು ಅವರ ಮಗ ಗೋವಿಂದ ರವರ ಭಾಗಕ್ಕೆ ಸರ್ವೆ ನಂ.35/2 ರಲ್ಲಿ 4 ಎಕರೆ 27 ಗುಂಟೆ ದಕ್ಷಿಣಾ ಅರ್ಧ ಭಾಗಕ್ಕೆ ಕೊಡಲಾಗಿದೆ ಎಂದರೆ ಸುಳ್ಳು. ಮಂಗಳೂರು ಹೆಂಚಿನ ಮನೆ ಮಧ್ಯ ಭಾಗದಲ್ಲಿ ಶಿವಮ್ಮ ಮತ್ತು ಅವರ ಮಗ ಲೇಟ್ ಗೋವಿಂದ ಅವರ ಪತ್ನಿ ವಾಸವಿದ್ದಾರೆ ಎಂದರೆ ಸುಳ್ಳು. ವಿಭಾಗ ಪತ್ರದ ಪ್ರಕಾರ ನನ್ನ ತಂದೆ ಮತ್ತು ಅವರ ತಾಯಿಗೆ ಸರ್ವೆ ನಂ.35/2 ರಲ್ಲಿ 4 ಎಕರೆ 27 ಗುಂಟೆ ದಕ್ಷಿಣಾರ್ಧ ಭಾಗ ಮತ್ತು ಗುಡಾರಕಟ್ಟಿನ ಮನೆ ದಕ್ಷಿಣಾರ್ಧ ಮತ್ತು ಮೂರನೇ ಒಂದು ಭಾಗವನ್ನು ಕೊಟ್ಟಿದ್ದಾರೆ ಎಂದರೆ ಸುಳ್ಳು. ವಿಭಾಗ ಪತ್ರದ ಮೇರೆಗೆ ನನ್ನ ತಂದೆ ಮೂರನೇ ಒಂದು ಭಾಗಕ್ಕೆ ನನ್ನ ತಂದೆ ಖಾತೆ ಮಾಡಿಸಿಕೊಂಡು ಅನುಭವಿಸಿಕೊಂಡಿದ್ದಾರೆ ಎಂದರೆ ಸುಳ್ಳು. ನನ್ನ ತಂದೆ 2 ನೇ ಪ್ರತಿವಾದಿಯನ್ನು ಪ್ರೀತಿಯಿಂದ ನೋಡುತ್ತ ಅವರ ಅವಶ್ಯಕತೆಯನ್ನು ಪುರೈಸುತ್ತಿದ್ದಾರೆ ಎಂದರೆ ಸುಳ್ಳು.

ಸುಮಾರು 10 ವರ್ಷದ ಹಿಂದೆ ನನ್ನ ತಂದೆಗೆ ಊಟ ಬಟ್ಟೆಯನ್ನು ನಾನೇ ಪುರೈಸುತ್ತಿದ್ದೆ. ಈಗ ನನ್ನ ತಂದೆಗೆ ವಯಸ್ಸಾಗಿದ್ದು ಬಹಳ ಅನಾರೋಗ್ಯದಿಂದ ನರಳುತ್ತಿದ್ದಾರೆ ಎಂದರೆ ಸುಳ್ಳು. ಈಗ ನನ್ನ ತಂದೆ 2 ನೇ ಪ್ರತಿವಾದಿ ಜೊತೆ ವಾಸವಿದ್ದಾರೆ ಎಂದರೆ ಸುಳ್ಳು. ನನ್ನ ತಂದೆಯ ಔಷಧಿ ಉಪಚಾರ ಮತ್ತು ಆಸ್ಪತ್ರೆ ಖರ್ಚುಗಳನ್ನು 2 ನೇ ಪ್ರತಿವಾದಿ ಭರಿಸುತ್ತಿದ್ದಾರೆ ಎಂದರೆ ಸುಳ್ಳು. ಸರ್ವೆ ನಂ.35/2 ರ 4 ಎಕರೆ 27 ಗುಂಟೆ ಜಮೀನು ಯಾರ ಹೆಸರಿನಲ್ಲಿ ಇದೆ ಎಂದರೆ ಗೊತ್ತಿಲ್ಲ. ಸದರಿ ಜಮೀನು ಮುಂಚೆ ನನ್ನ ತಂದೆ ಹೆಸರಿನಲ್ಲಿ ಇದ್ದುದು ಗೊತ್ತಿದೆ. ಸರ್ವೆ ನಂ.35/2 ಕ್ಕೆ ಸರ್ವೆ ಸೆಟಲ್ಮೆಂಟ್ ಆದ ನಂತರ ಸರ್ವೆ ನಂ.35/3 ಆಗಿದೆ ಎಂದರೆ ಗೊತ್ತಿಲ್ಲ. ಸರ್ವೆ ನಂ.35/3 ರ 4 ಎಕರೆ 27 ಗುಂಟೆ ಮೇಲೆ ನನಗೆ ಹಕ್ಕು ಸ್ವಾಧೀನ ಇದೆಯೇ ಎಂದರೆ ಇರುವುದಿಲ್ಲ ಆದರೆ ಒಟ್ಟು ಆಸ್ತಿಯ ಮೇಲೆ ಇದೆ. ಸರ್ವೆ ನಂ.35/2 ರ 4 ಎಕರೆ 27 ಗುಂಟೆ ಜಮೀನನ್ನು ದಿನಾಂಕಃ 05-09-2018 ರ ನೋಂದಣಿ ದಾನ ಪತ್ರದ ಅಡಿಯಲ್ಲಿ 2 ನೇ ಪ್ರತಿವಾದಿಗೆ ಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ. ನ್ಯಾಯಾಲಯಕ್ಕೆ ನಾನು ಹಾಜರು ಪಡಿಸಿರುವ ದಾಖಲೆಗಳನ್ನು ನಾನೇ ಪಡೆದುಕೊಂಡು ನಮ್ಮ ವಕೀಲರಿಗೆ ಕೊಟ್ಟಿದ್ದೇನೆ. ಆ ದಾಖಲೆಗಳನ್ನು ಹಾಜರು ಪಡಿಸುವ ಮೊದಲು ಅದರಲ್ಲಿ ಇರುವ ವಿಷಯಗಳನ್ನು ತಿಳಿದಿದ್ದೇನೆ ಎಂದರೆ ಸರಿ. ದಾನ ಪತ್ರದ ಆಧಾರದ ಮೇರೆಗೆ ಸರ್ವೆ ನಂ.35/2 ರ ಜಮೀನು 2 ನೇ ಪ್ರತಿವಾದಿಗೆ ಖಾತೆ ಆಗಿದೆ ಎಂದರೆ ನನ್ನ ಗಮನಕ್ಕೆ ಭಾರದೆ ಆಗಿದೆ. ದಾನ ಪತ್ರದ ಮೂಲಕ ಬಂದ ಜಮೀನಿಗೆ ಸರ್ವೆ ಸೆಟಲ್ಮೆಂಟ್ ಆದ ನಂತರ ಸರ್ವೆ ನಂ.35/3 ಆಗಿದೆ ಎಂದರೆ ಸರಿ. ಸರ್ವೆ ನಂ.35/3 ರ 4 ಎಕರೆ 27 ಗುಂಟೆ ಜಮೀನಿಗೆ 2 ನೇ ಪ್ರತಿವಾದಿಯೇ ಕಂದಾಯ ಕಟ್ಟಿಕೊಂಡು ಸ್ವಾಧೀನ ಇದ್ದಾರೆ ಎಂದರೆ ಸುಳ್ಳು. ನನ್ನ ತಂದೆ 2 ನೇ ಪ್ರತಿವಾದಿಗೆ ದಾನ ಪತ್ರ ಬರೆದುಕೊಟ್ಟಿದ್ದಾರೆ ಎಂಬ ಹೊಟ್ಟೆ ಹುರಿಯಿಂದ ನನಗೆ ಗೊತ್ತಿಲ್ಲದೆ 2 ನೇ ಪ್ರತಿವಾದಿ ಖಾತೆ ಮಾಡಿಸಿಕೊಂಡಿದ್ದಾರೆ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಗೆ ಕೊಟ್ಟಿರುವ ಜಮೀನಿನ ಮೇಲೆ ನನಗೆ ಯಾವುದೇ ಮಾಲಿಕತ್ವ ಮತ್ತು ಸ್ವಾಧೀನ ಇರುವುದಿಲ್ಲ ಎಂದರೆ ಸುಳ್ಳು. ವಾದಿ 1 ಮತ್ತು 2 ರವರಿಗೂ ಪ್ರತಿವಾದಿಗಳಿಗೂ ಯಾವುದೇ ರಕ್ತ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ವಾದಿ 2 ಮತ್ತು 3 ರವರು ತಿಮ್ಮೇಗೌಡರ ಮಕ್ಕಳು ಎಂದು ತೋರಿಸಲು ದಾಖಲೆ ಇವೆ.

ಪ್ರತಿವಾದಿಗಳ ಆಸ್ತಿಯನ್ನು ಹೇಗಾದರು ಮಾಡಿ ಹೊಡೆದುಕೊಳ್ಳಬೇಕೆಂದ ಉದ್ದೇಶದಿಂದ ವಾದಿ 2 ಮತ್ತು 3 ರವರ ಸಂಬಂಧವನ್ನು 1 ನೇ ವಾದಿ ಜೊತೆಗೆ ಸುಳ್ಳು ಸಂಬಂಧ ಹೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 5 ವರ್ಷದ ಹಿಂದಿನಿಂದಲೂ ನನ್ನ ತಂದೆಯನ್ನು ಭಾಗ ಕೇಳುತ್ತಿದ್ದೇನೆ. ಅದರ ತಾರೀಖು, ತಿಂಗಳು ಮತ್ತು ಇಸವಿ ಗೊತ್ತಿಲ್ಲ. ಆ ಬಗ್ಗೆ ಹರದೂರು ಗ್ರಾಮದಲ್ಲಿ ಪಂಚಾಯ್ತಿ ಆಗಿತ್ತು. ಆ ಸಂದರ್ಭದಲ್ಲಿ ನನ್ನ ತಂದೆ ಭಾಗಾಂಶ ಕೊಡುವುದಿಲ್ಲ ಎಂದು ಹೇಳಿದರು. ದಾವಾ ಆಸ್ತಿಯ ಮೇಲೆ ನನಗೆ ಯಾವುದೇ ಭಾಗಾಂಶದ ಹಕ್ಕು ಇಲ್ಲದಿದ್ದರೂ ನನ್ನ ತಂದೆಯನ್ನು ಭಾಗ ಕೇಳಿರುವುದಾಗಿ ಸುಳ್ಳು ದಾಖಲೆಗಳನ್ನು ಹಾಜರು ಪಡಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗಾಗಲೇ ನನಗೆ ಭಾಗ ಕೊಟ್ಟಿದ್ದರೂ ಸಹಾ ಹೆಚ್ಚಿನ ಲಾಭಾಂಶ ಪಡೆಯಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : 3 ರಿಂದ 6 ನೇ ಪ್ರತಿವಾದಿ ಪರ ಶ್ರೀ.ಎಂ.ಸಿ.ಹೆಚ್.ವಕೀಲರಿಂದಃ**

ಶಿವಮ್ಮ ಬದುಕಿದ್ದಾರೆ. ಶಿವಮ್ಮ ತೀರಿಕೊಂಡಿದ್ದಾರೆ ಅಂತ ನಾನು ಅರ್ಜಿ ಸಲ್ಲಿಸಿಲ್ಲ. ಶಿವಮ್ಮ ರವರ ಮಗನನ್ನು ಗೋವಿಂದ ಅಂತ ಕರೆಯುತ್ತಿದ್ದರು, ಗೋವಿಂದೇಗೌಡ ಕರೆಯುತ್ತಿದ್ದದು ನನಗೆ ಗೊತ್ತಿಲ್ಲ. ಗೋವಿಂದೇಗೌಡ 2005 ರಲ್ಲಿ ಮೃತ ಪಟ್ಟಿದಾರೆ ಎಂದರೆ ಸರಿ. ತಿಮ್ಮೇಗೌಡರು ದಿನಾಂಕಃ 19-10-2019 ರಂದು ಪ್ರತಿವಾದಿ 4 ಮತ್ತು 5 ರವರಿಗೆ ಒಂದು ವ್ಯವಸ್ಥಾ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸುಳ್ಳು. ಸದರಿ ನೊಂದಾಯಿತ ವ್ಯವಸ್ಥಾ ಪತ್ರದ ಪ್ರಕಾರ ಪ್ರತಿವಾದಿ 4 ಮತ್ತು 5 ರವರೇ ಸ್ವಾಧೀನ ಹೊಂದಿದ್ದಾರೆ ಎಂದರೆ ಸುಳ್ಳು.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

***ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.***
**ಪಿರಿಯಾಪಟ್ಟಣ**